2017 ಕ.ತೀ.ವ 1154

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

ಶ್ರೀಮತಿ ಲಘಮವ್ವ ಮತ್ತು ಇತರರು –ವಿರುದ್ಧ– ಗಂಗವ್ವ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100 ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿನಲ್ಲಿ ಭಾಗ ಮತ್ತು ಪ್ರತ್ಯೇಕ ಅನುಭವ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆಗಾಗಿ ಕೋರಿ ಸಲ್ಲಿಸಿದ ದಾವೆಯನ್ನು ಪುರಸ್ಕರಿಸಿದ ಡಿಕ್ರಿಯನ್ನು ಎರಡನೇ ಪ್ರತಿ ವಾದಿಯು ಮೊದಲನೇ ಮೇಲ್ಮನವಿಯನ್ನು ಸಲ್ಲಿಸುತ್ತಾನೆ. ಮೇಲ್ಮನವಿ ವಜಾಗೊಳ್ಳುತ್ತದೆ. ಆತನ ನಿಧನದ ಪರಿಣಾಮ ಆತನ ವಾರಸುದಾರರಿಂದ ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲನೇ ಮೇಲ್ಮನವಿ ನ್ಯಾಯಾಲಯ ಸಮವರ್ತಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಎರಡನೇ ಪ್ರತಿವಾದಿಯು ಉಯಿಲನ್ನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63 ಹಾಗೂ 68ರಂತೆ ರುಜುವಾತು ಪಡಿಸಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಕೆಳ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆ* | *ಪ್ಯಾರಾದಲ್ಲಿ* |
|---|---|
| *1. ಐಎಲ್ಆರ್ 2008 ಕೆಎಆರ್ 2115 ಜೆ.ಟಿ. ಸೂರಪ್ಪ ಮತ್ತು ಮತ್ತೊಬ್ಬರು –ವಿರುದ್ಧ– ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮೀಜಿ ಪಬ್ಲಿಕ್ ಟ್ರಸ್ಟ್ ಮತ್ತು ಇತರರು* | *(ಉಲ್ಲೇ) 7* |

*ಆರ್.ಎಸ್.ಎ. ಸಂ. 100234/2016, ದಿನಾಂಕ: 15ನೇ ಡಿಸೆಂಬರ್, 2016.

ಅಪೀಲುದಾರರ ಪರವಾಗಿ: ಶ್ರೀ ನವೀನ್.ಆರ್ ಮೇಲಿನಮನೆ, ವಕೀಲರು;
5ನೇ ಪ್ರತ್ಯಪೀಲುದಾರರನ್ನು ಪಕ್ಷಕಾರರ ಮೂಲಕ ಹಾಜರುಪಡಿಸಲಾಗಿದೆ.
ಆರ್.ಎ. ನ್ಯಾಯಾಲಯದ ಮುಂದೆ ಪಕ್ಷಕಾರನಾಗಿ ಮಾಡಿರುವುದಿಲ್ಲ.

## ತೀರ್ಪು

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ:**

ಈ ಅಪೀಲನ್ನು, ಕೆಳ ನ್ಯಾಯಾಲಯದ ಸಮವರ್ತಿ ನಿರ್ಣಯಗಳ ವಿರುದ್ಧ ನಿರ್ದೇಶಿಸಲಾಗಿದೆ. ದಾವೆಯ ಸ್ವತ್ತುಗಳಲ್ಲಿ ಅರ್ಧಭಾಗದ ಪರಿಹಾರ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ಪ್ರತಿವಾದಿಗಳ ವಿರುದ್ಧ ಮತ್ತು 2 ರಿಂದ 4ನೇ ಪ್ರತಿವಾದಿಗಳ ಅಥವಾ ಅವರ ಪರವಾಗಿ ಯಾರೇ ವ್ಯಕ್ತಿಗಳು ವಾದಿಯ ಶಾಂತಿಯುತ ಸ್ವಾಧೀನವನ್ನು ಅಡ್ಡಿ ಮಾಡಬಾರದೆಂದು ಮತ್ತು ದಾವೆಯ ಸ್ವತ್ತುಗಳಲ್ಲಿ ಆಕೆಯ ಭಾಗವನ್ನು ಪಡೆದುಕೊಳ್ಳಲು ಅಡ್ಡಿಪಡಿಸಬಾರದೆಂದು ಶಾಶ್ವತ ಪ್ರತಿಬಂಧಕಾಜ್ಞೆಗಾಗಿ ಓ.ಎಸ್. 251/1990 (ಹೊಸ ಸಂ.92/1997)ನ್ನು ವಾದಿಯು ಹೂಡಿದ್ದಾಳೆ.

2. ಅನುಕೂಲಕ್ಕಾಗಿ, ಪಕ್ಷಕಾರರು, ಅಧಿವಿಚಾರಣಾ ನ್ಯಾಯಾಲಯದಲ್ಲಿ ಅವರು ಇದ್ದ ವರ್ಗೀಕರಣದ ಪ್ರಕಾರವೇ ಉಲ್ಲೇಖಿಸಲಾಗಿದೆ.

3. ದಾವೆಯ ವಿಷಯವು ಹುಕ್ಕೇರಿ ತಾಲ್ಲೂಕಿನ ನಾಗನೂರಿನಲ್ಲಿರುವ ಎಂ.ಪಿ.ಸಿ. ನಂ.317ನ್ನು ಹೊಂದಿದ ಮನೆ ಸ್ವತ್ತಾಗಿದ್ದು, ಎಂಪಿಸಿ ಸಂ.318 ಮತ್ತು 320 ರಲ್ಲಿನ ಸ್ವತ್ತಿನ ಖಾಲಿ ಸ್ಥಳವಾಗಿದೆ. ಆಕೆ ಮತ್ತು 1ನೇ ಪ್ರತಿವಾದಿಯು, ರಾಮಪ್ರಭು ಗುಡ್ಡಾಕಾಯಿಯ ಪುತ್ರಿಯರಾಗಿದ್ದು, ತಮ್ಮ ಕುಟುಂಬದ ಮುಖ್ಯಸ್ಥರಾಗಿದ್ದ ತಂದೆ, ವಾದಿ, ಪ್ರತಿವಾದಿ ಮತ್ತು ಅವರ ತಾಯಿಯನ್ನು ಬಿಟ್ಟು ಸುಮಾರು 34 ವರ್ಷಗಳ ಹಿಂದೆಯೇ ಮೃತರಾಗಿರುತ್ತಾರೆ. ಅದಕ್ಕನುಸಾರವಾಗಿ, ವಾದಿ ಮತ್ತು 1ನೇ ಪ್ರತಿವಾದಿಯ ತಾಯಿ ವಾದಿ ಮತ್ತು 1ನೇ ಪ್ರತಿವಾದಿಯೊಂದಿಗೆ ದಾವೆಯ ಸ್ವತ್ತುಗಳಲ್ಲಿ ಅನುಭೋಗದಲ್ಲಿದ್ದಾರೆ ಹಾಗೂ ಆಕೆಯ ಹೆಸರು ದಾವೆಯ ಸ್ವತ್ತುಗಳಲ್ಲಿ

ನಮೂದಿಸಲಾಗಿತ್ತು ಮತ್ತು 1968ನೇ ವರ್ಷದಲ್ಲಿ ಆಕೆಯು ಮೃತಳಾಗಿದ್ದಾಳೆ. ಆ ತದನಂತರ, ವಾದಿ ಮತ್ತು 1ನೇ ಪ್ರತಿವಾದಿಯು, ಸದರಿ ಸ್ವತ್ತುಗಳನ್ನು ಅನುಭೋಗಿಸುತ್ತಿದ್ದಾರೆ ಮತ್ತು ಅವರ ಹೆಸರುಗಳನ್ನು ಪಂಚಾಯಿತಿ ದಾಖಲೆಗಳಲ್ಲಿ ನಮೂದಿಸಲಾಗಿದೆ. 2 ರಿಂದ 4ನೇ ಪ್ರತಿವಾದಿಗಳು, ಶಾಂತಿಯುತ ಸ್ವಾಧೀನವನ್ನು ವಾದಿಯಿಂದ ಕಸಿದುಕೊಳ್ಳುವ ಉದ್ದೇಶದಿಂದ ಶಾಮೀಲಾಗಿದ್ದು, ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರು, ಸದರಿ ಸ್ವತ್ತುಗಳಲ್ಲಿ ಹಕ್ಕುಗಳನ್ನು ಪಡೆದುಕೊಳ್ಳಲು ಕ್ಲೇಮು ಮಾಡಿದ್ದಾರೆಯೆಂದು ಆಪಾದಿಸಲಾಗಿದೆ. ಈ ವಾದ ಪತ್ರಗಳ ಆಧಾರದ ಮೇಲೆ, ದಾವೆಯನ್ನು ಹೂಡಲಾಗಿದೆ.

4. ನೋಟೀಸ್ ಜಾರಿಯಾದ ಮೇಲೆ 2 ಮತ್ತು 4ನೇ ಪ್ರತಿವಾದಿಗಳು ತಮ್ಮ ನ್ಯಾಯವಾದಿಯ ಮೂಲಕ ಹಾಜರಾಗಿದ್ದಾರೆ ಮತ್ತು ಸಮನ್ಸ್ ಜಾರಿಯಾಗಿದ್ದರೂ ಹಾಜರಾಗದೇ ಉಳಿದಿದ್ದಾರೆ 1ನೇ ಪ್ರತಿವಾದಿಯು ಸಮನ್ಸ್ ಜಾರಿಗೆ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ 3ನೇ ಪ್ರತಿವಾದಿಯ ವಿರುದ್ಧದ ದಾವೆಯನ್ನು ವಜಾಗೊಳಿಸಲಾಗಿದೆ. 2ನೇ ಪ್ರತಿವಾದಿಯು, ಲಿಖಿತ ಹೇಳಿಕೆ ದಾಖಲು ಮಾಡಿದ್ದಾನೆ ಮತ್ತು ದಾವೆಯ ಸ್ವತ್ತುಗಳನ್ನು, ನಿಶಾನೆ ಡಿ.4 ಎಂದು ಗುರುತು ಮಾಡಲಾಗಿರುವ ನೋಂದಾಯಿತ ಉಯಿಲು ದಿನಾಂಕ 31.3.1954ರ ಮೂಲಕ ತನ್ನ ಹೆಸರಿನಲ್ಲಿ ವಾದಿಯ ಅಜ್ಜನಿಂದ ಮರಣ ಶಾಸನದ ಮೂಲಕ ಕೊಡಲಾಗಿದೆಯೆಂದು ವಾದಿಸಲಾಗಿದೆ. 1ನೇ ಪ್ರತಿವಾದಿಯ, ವಾದಿಯ ವಿವಾಹವನ್ನು ನೆರವೇರಿಸಿದ್ದಾರೆ. ಮತ್ತು 1ನೇ ಪ್ರತಿ ವಾದಿಯು, 2ನೇ ಪ್ರತಿವಾದಿಯ ಬೆನ್ನೆಲುಬಾಗಿದ್ದಾರೆ. ವಾದಿ ಮತ್ತು 1ನೇ ಪ್ರತಿವಾದಿಯು ಹಿಂದೆ ಸದರಿ ಪ್ರಭು ಮರಣದ ತರುವಾಯ ಪಂಚಾಯತ್ ದಾಖಲೆಗಳಲ್ಲಿ ತಮ್ಮ ಹೆಸರುಗಳನ್ನು ನಮೂದಿಸಿದ್ದಾರೆ. 2ನೇ ಪ್ರತಿವಾದಿಯು, ಪ್ರಭು ಅವರ ಆರೈಕೆಯನ್ನು ಮಾಡುತ್ತಿದ್ದರು. ತಾನು, ಕಳೆದ 20 ವರ್ಷಗಳಿಂದಲೂ ದಾವೆಯ ಸ್ವತ್ತುಗಳಲ್ಲಿ ವಾಸ್ತವಿಕವಾಗಿ ಸ್ವಾಧೀನದಲ್ಲಿದ್ದೇನೆ ಮತ್ತು ಅನುಭೋಗಿಸುತ್ತಿದ್ದೆನೆಂಬುದು ಆತನ ಮುಂದುವರೆದ ವಾದವಾಗಿದೆ. 4ನೇ ಪ್ರತಿವಾದಿಯು, ಯಾವುದೇ ಲಿಖಿತ ಹೇಳಿಕೆಯನ್ನು ದಾಖಲು ಮಾಡಿರುವುದಿಲ್ಲ. ವಾದ ಪ್ರತಿವಾದ ಪತ್ರಗಳ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯ ವಿವಾದಾಂಶಗಳನ್ನು ರೂಪಿಸಿದೆ ಮತ್ತು ದಾಖಲೆ ಮೇಲಿನ ಸಾಕ್ಷ್ಯವನ್ನು ವಿವೇಚಿಸಿದ

ತರುವಾಯ, ದಾವೆಯನ್ನು ಡಿಕ್ರಿ ಮಾಡಿ ದಾವೆಯ ಸ್ವತ್ತುಗಳಲ್ಲಿ ಅರ್ಧಭಾಗಕ್ಕಾಗಿ, ವಾದಿಯು ಹಕ್ಕುಳ್ಳವಳಾಗಿರುತ್ತಾಳೆಂದು ಅಭಿಪ್ರಾಯಪಟ್ಟಿದೆ. 2 ಮತ್ತು 4ನೇ ಪ್ರತಿವಾದಿಗಳು, ಯಾವುದೇ ರೀತಿಯಲ್ಲಿ ದಾವೆಯ ಸ್ವತ್ತುಗಳನ್ನು ಅನುಭೋಗಿಸುತ್ತಿರುವ ವಾದಿಯನ್ನು ಅಡ್ಡಿಪಡಿಸುವುದರಿಂದ ಖಾಯಂ ನಿರ್ಬಂಧಕಾಜ್ಞೆ ಮೂಲಕ ತಡೆಯಲಾಗಿದೆ. ಇದರಿಂದ ಬಾಧಿತನಾಗಿರುವ, 2ನೇ ಪ್ರತಿವಾದಿಯು, ಕೆಳ ಅಪೀಲು ನ್ಯಾಯಾಲಯದ ಮುಂದೆ ನಿಯತ ಅಪೀಲನ್ನು ಹೂಡಿದ್ದಾನೆ. ಕೆಳ ಅಪೀಲು ನ್ಯಾಯಾಲಯದ ಮುಂದೆ ಅಪೀಲು ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ, 2ನೇ ಪ್ರತಿವಾದಿಯು ಮೃತನಾಗಿದ್ದಾನೆ ಮತ್ತು ಅವನ ಕಾನೂನು ಪ್ರತಿನಿಧಿಗಳು, ದಾಖಲೆ ಮೇಲೆ ಬಂದಿದ್ದಾರೆ. ದಾಖಲೆ ಮೇಲಿನ ಸಾಕ್ಷ್ಯವನ್ನು ಮರು ವಿವೇಚಿಸಿದ ತರುವಾಯ ಕೆಳ ಅಪೀಲು ನ್ಯಾಯಾಲಯ ಅಪೀಲನ್ನು ವಜಾಗೊಳಿಸಿದೆ. ಅದರ ವಿರುದ್ಧ ಈ ಎರಡನೇ ನಿಯತ ಅಪೀಲನ್ನು 2ನೇ ಪ್ರತಿವಾದಿಯ ಮೂಲಕ ಹೂಡಲಾಗಿದೆ.

5. ಈ ಕೆಳ ನ್ಯಾಯಾಲಯಗಳ ಇಡೀ ಆಲೋಚನಾ ಕ್ರಮ, ಸರಿಯಾಗಿಲ್ಲವೆಂದು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ. ಈ ಎರಡೂ ಕೆಳ ನ್ಯಾಯಾಲಯಗಳು, ಹೆಚ್ಚು ನಿರ್ದಿಷ್ಟವಾಗಿ ನಿಶಾನೆ .ಡಿ.4, 2ನೇ ಪ್ರತಿವಾದಿಯ ಹೆಸರಿನಲ್ಲಿ ಪ್ರಭು ಇವರಿಂದ ಬರೆದು ಕೊಡಲಾದ ನೋಂದಾಯಿತ ಉಯಿಲನ್ನು ಪ್ರತಿವಾದಿಯಿಂದ ಮಂಡಿಸಲಾದ ದಸ್ತಾವೇಜುಗಳನ್ನು ಪರಿಗಣಿಸಲು ವಿಫಲವಾಗಿವೆಯೆಂದಿದ್ದಾರೆ. ಕೆಳ ನ್ಯಾಯಾಲಯಗಳಿಂದ ನಿರ್ಧರಿಸಿದ ಕಾರಣಗಳು, ವಾದಪತ್ರಗಳ ವಿರುದ್ಧವಾಗಿದೆಯೆಂದು ಮಾನ್ಯ ನ್ಯಾಯವಾದಿ ವಾದವನ್ನು ಮಂಡಿಸಿದ್ದಾರೆ. ಉಯಿಲು ಪತ್ರ, ನಿಶಾನೆ ಡಿ.4ನ್ನು ಅನುಪ್ರಮಾಣದ ಸಾಕ್ಷಿದಾರರು ಮತ್ತು ಬರಹಗಾರನ ಸಹಿಯನ್ನು ಒಪ್ಪಿರುವ ಅನುಪ್ರಮಾಣನ ಮತ್ತು ಬರಹಗಾರರ ಪುತ್ರರನ್ನು ಪರೀಕ್ಷಿಸುವುದರ ಮೂಲಕ ಕಾನೂನಿನ ಅನುಸಾರವಾಗಿ ಇದೆಯೆಂದು ರುಜುವಾತು ಪಡಿಸಲಾಗಿದೆಯೆಂದು ನಿವೇದಿಸಿದ್ದಾರೆ. ಕೆಳ ಅಪೀಲು ನ್ಯಾಯಾಲಯ, ಅದರ ಯುಕ್ತ ಯಥಾ ದೃಷ್ಟಿಚಿತ್ರಣದಲ್ಲಿರುವಂತೆ, ಮೌಖಿಕ ಮತ್ತು ದಸ್ತಾವೇಜು ಎರಡರ ಸಾಕ್ಷ್ಯವನ್ನು ಮರು ವಿವೇಚಿಸಲು ವಿಫಲವಾಗಿವೆ. ಹೀಗಾಗಿ, ಕೆಳ ನ್ಯಾಯಾಲಯಗಳು ಮಾಡಿದ ತೀರ್ಪು ಮತ್ತು ಡಿಕ್ರಿಯು, ವ್ಯತಿರಿಕ್ತವಾಗಿದ್ದು, ದಾಖಲೆ ಮೇಲೆ

ಮಂಡಿಸಲಾದ ಸಾಮಗ್ರಿ ಸಾಕ್ಷ್ಯದೊಂದಿಗೆ ಸದೃಶವಾಗಿರುವುದಿಲ್ಲ. ಅದಕ್ಕನುಸಾರವಾಗಿ, ಈ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸುವುದಕ್ಕಾಗಿ ಮತ್ತು ಪರಿಗಣನೆಗಾಗಿ ಅಸ್ತಿತ್ವದಲ್ಲಿರುವ ಕಾನೂನು ಮುಖ್ಯ ಪ್ರಶ್ನೆಯಾಗಿರುವುದರಿಂದ ಈ ಅಪೀಲನ್ನು ಪುರಸ್ಕರಿಸುವಂತೆ ಕೋರಿದ್ದಾರೆ.

6. ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯ ವಾದಿಯ ಅಹವಾಲನ್ನು ಆಲಿಸಲಾಗಿದೆ ಮತ್ತು ದಾಖಲೆ ಮೇಲಿನ ಸಾಮಗ್ರಿಯನ್ನು ಪರಿಶೀಲಿಸಲಾಗಿದ್ದು, ಮೂಲ ಕುಟುಂಬದ ಮುಖ್ಯಸ್ಥರಾಗಿದ್ದ ಪ್ರಭು, ಇವರಿಗೆ ರಾಮ ಹೆಸರಿನ ಪುತ್ರನಿದ್ದು ಯಲ್ಲವ್ವ ರಾಮನ ಪತ್ನಿಯಾಗಿದ್ದಾರೆ ಮತ್ತು 2ನೇ ಪ್ರತಿವಾದಿ, ಸದರಿ ಯಲ್ಲವ್ವನ ಸಹೋದರನಾಗಿರುತ್ತಾನೆ. ರಾಮ, 1950ನೇ ವರ್ಷದಲ್ಲಿ ಮೃತನಾಗಿದ್ದು, ಪ್ರಭು 1961ನೇ ವರ್ಷದಲ್ಲಿ ಮೃತನಾಗಿದ್ದಾನೆ ಮತ್ತು ಯಲ್ಲವ್ವ 1968ನೇ ವರ್ಷದಲ್ಲಿ ಮೃತಳಾಗಿದ್ದಾಳೆ. ದಿನಾಂಕ 31.3.1954ರ, ಉಯಿಲಿನ ಮೂಲಕ ದಾವೆಯ ಸ್ವತ್ತುಗಳನ್ನು ಮರಣ ಶಾಸನದ ಮೂಲಕ ಕೊಟ್ಟಿದ್ದು, ಅವನ ಹೆಸರಿನಲ್ಲಿ ಸದರಿ ಪ್ರಭುವಿನಿಂದ ಬರೆದು ಕೊಡಲಾಗಿದೆಯೆಂಬುದು 2ನೇ ಪ್ರತಿವಾದಿಯ ವಾದವಾಗಿದೆ. ನಿಶಾನೆ ಡಿ.4 ಉಯಿಲಿನ ಆಧಾರದ ಮೇಲೆ 2ನೇ ಪ್ರತಿವಾದಿಯು, ದಾವೆ ಸ್ವತ್ತುಗಳ ಮೇಲೆ ತನ್ನ ಹಕ್ಕು ಮತ್ತು ಸ್ವಾಮ್ಯವನ್ನು ಕ್ಲೇಮು ಮಾಡಿದ್ದಾನೆ. ವಾದಿಯ ಮೊಕದ್ದಮೆಯೆಂದರೆ, ತಾವು ಪ್ರಭು ಮೊಮ್ಮಕ್ಕಳಾಗಿರುವುದರಿಂದ ಮತ್ತು ತಮ್ಮ ಹೆಸರುಗಳನ್ನು, ಪಂಚಾಯಿತಿ ದಾಖಲೆಗಳಲ್ಲಿ ನಮೂದಿಸಲಾಗಿದ್ದು, ಅವರ ತಾಯಿ ಯಲ್ಲವ್ವನ ಮರಣದ ತರುವಾಯ ದಾವೆಯ ಸ್ವತ್ತುಗಳಿಗೆ ಸಂಬಂಧಪಟ್ಟಂತೆ, ವಾದಿಗಳು ಮತ್ತು 1ನೇ ಪ್ರತಿವಾದಿಯು, ದಾವೆಯ ಸ್ವತ್ತುಗಳ ಸ್ವಾಧೀನದಲ್ಲಿ ಮುಂದುವರೆದಿರುತ್ತಾರೆ ಮತ್ತು ಸ್ವಾಧೀನ ಕಾನೂನು ಬದ್ಧವಾಗಿದ್ದು, ಸೃಷ್ಟಿಸಲಾದ ಸಂಬಂಧಿತ ದಸ್ತಾವೇಜುಗಳಿಂದ 2 ರಿಂದ 4ನೇ ಪ್ರತಿವಾದಿಗಳು ತಮಗೆ ತೊಂದರೆ ನೀಡುತ್ತಿದ್ದಾರೆಂಬುದು ವಾದಿಗಳ ಪ್ರಕರಣವಾಗಿದೆ.

7. ಪ್ರಮುಖ ವಿವಾದಾಂಶವು, 2ನೇ ಪ್ರತಿವಾದಿಯು ಹೆಸರಿಗೆ ಪ್ರಭುನಿಂದ ಬರೆದುಕೊಡಲಾದುದೆಂಬ. ದಿನಾಂಕ 31.3.1954ರ ಉಯಿಲು ರುಜುವಾತುಪಡಿಸುವುದಕ್ಕೆ ಸಂಬಂಧಪಟ್ಟದಾಗಿದೆ, ಈ ಸಂದರ್ಭದಲ್ಲಿ,

***ಜೆ.ಟಿ. ಸೂರಪ್ಪ ಮತ್ತು ಮತ್ತೊಬ್ಬರು –ವಿರುದ್ಧ– ಶ್ರೀ ಸಚ್ಚಿದಾನಂದ್ರೇಂದ್ರ ಸರಸ್ವತಿ ಸ್ವಾಮೀಜಿ ಪಬ್ಲಿಕ್ ಟ್ರಸ್ಟ್ ಮತ್ತು ಇತರರು*** [1], ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಸಮರ್ಪಕವಾಗಿದ್ದು, ಮಂಡಿಸಲಾದ ಉಯಿಲನ್ನು ರುಜುವಾತು ಪಡಿಸುವುದಕ್ಕೆ ಐದು ಕ್ರಮಗಳನ್ನು ಪರಿಗಣಿಸುವುದು ಅಗತ್ಯವೆಂದು ಅದರಲ್ಲಿ ಹೇಳಲಾಗಿದೆ. ಆ ಐದು ಕ್ರಮಗಳೆಂದರೆ, ಭಾರತ ಉತ್ತರಾಧಿಕಾರ ಅಧಿನಿಯಮ, 1925ರ (ಈ ಅಧಿನಿಯಮವನ್ನು ಸಂಕ್ಷಿಪ್ತವಾಗಿ) ಅಡಿಯಲ್ಲಿ ಉಯಿಲು ಸಿಂಧುವಾಗಿರಬೇಕು, ಅದನ್ನು ಬರಹಕ್ಕಿಳಿಸಿರಬೇಕು, ಉಯಿಲುದಾರನ ಸಹಿಯಿರಬೇಕು, ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಸಾಕ್ಷ್ಯದಾರರು ದೃಢೀಕರಿಸಿರಬೇಕು ಮತ್ತು ಕೊನೆಯ ಪಕ್ಷ, ಅನುಪ್ರಮಾಣನ ಸಾಕ್ಷಿದಾರರೊಬ್ಬರನ್ನು ಪರೀಕ್ಷಿಸತಕ್ಕದ್ದು. ಈ ಕಾನೂನು ಅಗತ್ಯತೆಗಳು, ಕಾನೂನು ದೃಷ್ಟಿಯಲ್ಲಿ ಕಂಡು ಬರದಿದ್ದಲ್ಲಿ, ಅದು ಉಯಿಲಿನ ಪ್ರಶ್ನೆಯಾಗಲಾರದು. ಮೊದಲು, ಮೇಲೋಟ್ನಕ್ಕೆ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಸ್ತಾವೇಜುಗಳು ಈ ಕಾನೂನು ಅಗತ್ಯತೆ ತೃಪ್ತಿಕರವಾಗಿರದಿದ್ದಲ್ಲಿ ನ್ಯಾಯಾಲಯದ ಅಗತ್ಯತೆಯು, ಸಂಬಂಧಪಟ್ಟ ಅದನ್ನು ಯುಕ್ತವಾಗಿ ಬರೆದುಕೊಡುವಷ್ಟರ ಮಟ್ಟಿಗೆ ಯಾವುದೇ ಮುಂದಿನ ವಿಚಾರಣೆಯನ್ನು ಮಾಡಲಾಗದು ಮತ್ತು ಸದರಿ ದಸ್ತಾವೇಜು ಆಧಾರದ ಮೇಲಿನ ಕ್ಲೇಮು ನಕಾರಾತ್ಮಕವಾಗಿದೆ. ಎರಡನೇ ಕ್ರಮ, ಕಾನೂನು ಪ್ರತಿನಿಧಿಗಳ ವಾರಸು ತಪ್ಪಿಸಿರುವಾಗ, ನ್ಯಾಯಾಲಯ, ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದ ಆಸ್ಥೆಯೊಂದಿಗೆ ಸಾಕ್ಷ್ಯವನ್ನು ಪರಿಶೀಲಿಸಬೇಕಗುತ್ತದೆ. ಮೂರನೇ ಕ್ರಮ, ಉಯಿಲುದಾರನು, ಉಯಿಲನ್ನು ಬರೆದುಕೊಟ್ಟ ಸಮಯದಲ್ಲಿ ಸ್ವಸ್ಥಚಿತ್ತನಾಗಿದ್ದಾನೆಯೇವೆಂಬುದನ್ನು ನಿರ್ಣಯಿಸಬೇಕಾಗುತ್ತದೆ. ನಾಲ್ಕನೇ ಕ್ರಮ, ಉಯಿಲನ್ನು ಬರೆದುಕೊಟ್ಟ ಯಾವುದೇ ಸಂಶಯಾಸ್ಪಾದ ಸಂದರ್ಭಗಳ ಪರಿಸ್ಥಿತಿಗಳು ಇವೆಯೇವೆಂಬುದನ್ನು ನಿರ್ಣಯಿಸಬೇಕಾಗುತ್ತದೆ. ಐದನೇ ಕ್ರಮ, ಉಯಿಲನ್ನು ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣವನ್ನು ಓದಿಕೊಂಡು ಈ ಅಧಿನಿಯಮದ 63ನೇ ಪ್ರಕರಣದ ಅನುಸಾರವಾಗಿ ಬರೆದು ಕೊಡಲಾಗಿದೆಯೇ ಎಂಬುದನ್ನು ಪರಿಗಣಿಸಬೇಕಾಗುತ್ತದೆ.

8. ದಸ್ತಾವೇಜು, ನಿಶಾನೆ ಡಿ.4ನ್ನು ಮೇಲೆ ಹೇಳಲಾದಂತೆ, ಈ ನ್ಯಾಯಾಲಯ ಹೇಳಲಾದ ಮಾನದಂಡಗಳ ನಿಬಂಧನೆಗಳಲ್ಲಿರುವಂತೆ ವಿಶ್ಲೇಷಿಸಿದಲ್ಲಿ, ಮೊದಲನೇ

1. ಐಎಲ್ಆರ್ 2008 ಕೆಎಆರ್ 2115

ಕ್ರಮ ಎಂದರೆ, ಕನಿಷ್ಠ ಪಕ್ಷ ಅನುಪ್ರಮಾಣಿನ ಸಾಕ್ಷಿದಾರ ಒಬ್ಬರನ್ನು ಪರೀಕ್ಷಿಸಲಾಗಿದೆಯೇ ಎಂದು ನೋಡಿದಲ್ಲಿ ಅದು ತೃಪ್ತಿಕರವಾಗಿರುವುದಿಲ್ಲ. ರುಜುವಾತುಪಡಿಸಿದಂತೆ ಈ ಉಯಿಲನ್ನು ಅನುಮೋದಿಸಲಾಗಿದೆ ಎಂಬುದು ನಿಖರವಾಗಿ ಸ್ಪಷ್ಟಪಡಿಸುತ್ತದೆ. ಬರಹಗಾರ ಮತ್ತು ಅನುಪ್ರಮಾಣಿನ ಸಾಕ್ಷಿದಾರರು ಮಕ್ಕಳನ್ನು ಉಯಿಲು ನಿಶಾನೆ ಡಿ.4 ರಲ್ಲಿರುವಂತೆ ಬರಹಗಾರ ಮತ್ತು ಅನುಪ್ರಮಾಣಿನ ಸಾಕ್ಷಿದಾರರ ಸಹಿಯನ್ನು ಗುರುತಿಸಲು ಪರೀಕ್ಷಿಸಲಾಗಿದೆಯೆಂಬುದನ್ನು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಒತ್ತಿ ಹೇಳಿದ್ದಾರೆ. ಬರಹಗಾರ ಮತ್ತು ಅನುಪ್ರಮಾಣಿನ ಸಾಕ್ಷಿದಾರರ ಮಕ್ಕಳನ್ನು ಪರೀಕ್ಷಿಸಿದ್ದು, ಈ ಉಯಿಲಿನ ನೈಜತೆಯನ್ನು ರುಜುವಾತು ಪಡಿಸಿರುವುದಿಲ್ಲ ಇಲ್ಲವೇ ಈ ಉಯಿಲನ್ನು ರುಜುವಾತು ಪಡಿಸುವುದಕ್ಕಾಗಿ ಪ್ರಮಾಣಗಳನ್ನು ಅನುಸರಿಸಿರುವುದಿಲ್ಲ. ಎರಡನೇ ಕ್ರಮ ಎಂದರೆ, "ಕಾನೂನು ವಾರಸುದಾರರ, ವಾರಸು ತಪ್ಪಿಸಿರುವಾಗ, ಉಯಿಲನ್ನು ಪರಿಶೀಲಿಸಲು ಹೆಚ್ಚಿನ ಪ್ರಮಾಣದ ಎಚ್ಚರಿಕೆಯನ್ನು ಈ ನ್ಯಾಯಾಲಯ ತೆಗೆದುಕೊಳ್ಳಬೇಕಾಗುತ್ತದೆ. 2ನೇ ಪ್ರತಿವಾದಿ, ಪ್ರಭು ಸೊಸೆಯ ಸಹೋದರನಾಗಿದ್ದು, ಒಪ್ಪಲಾಗಿರುವಂತೆ, ಉಯಿಲನ್ನು ವಾದಿ ಮತ್ತು 1ನೇ ಪ್ರತಿವಾದಿ ಮೊಮ್ಮಕ್ಕಳು ಇತ್ಯಾದಿ ವಿರುದ್ಧ ವಾರಸು ತಪ್ಪಿಸಲಾಗಿದೆ. ಮೂರನೇಯರಾಗಿ, ಸಾಕ್ಷ್ಯವನ್ನು ವಿವೇಚಿಸಿದ ಮೇಲೆ, ಕೆಳ ನ್ಯಾಯಾಲಯಗಳು, ಉಯಿಲುದಾರ ಈ ಉಯಿಲನ್ನು ಬರೆದುಕೊಟ್ಟ ಸಮಯದಲ್ಲಿ ಸ್ವಸ್ತಚಿತ್ತನಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ ಅಥವಾ ಬೇರೊಂದು ರೀತಿಯಲ್ಲಿ, ಅದನ್ನು ರುಜುವಾತುಪಡಿಸಲು ಈ ಉಯಿಲಿನ ಪ್ರತಿಪಾದಕನ ಮೇಲೆ ಭಾರ ಹೊರಿಸಿದ್ದನ್ನು, ರದ್ದುಪಡಿಸಿಲ್ಲವೆಂದು ಅಭಿಪ್ರಾಯಪಟ್ಟಿದೆ. ಈ ಉಯಿಲಿನ ಉಯಿಲುದಾರನು, ಈ ಉಯಿಲನ್ನು ಬರೆದುಕೊಟ್ಟ ಸಮಯದಲ್ಲಿ ಅಸ್ವಸ್ಥಚಿತ್ತನಾಗಿರುವುದಿಲ್ಲವೆಂಬುದನ್ನು ರುಜುವಾತು ಪಡಿಸುವುದು 2ನೇ ಪ್ರತಿವಾದಿಯ ಹೊಣೆಯಾಗಿದೆ. ದಾಖಲೆ ಮೇಲಿನ ಸಾಮಾಗ್ರಿ ಸಾಕ್ಷ್ಯದ ಮೇಲೆ, ಪ್ರಭು, ಈ ಉಯಿಲನ್ನು ಬರೆದುಕೊಟ್ಟ ಸಮಯದಲ್ಲಿ ಸ್ವಸ್ಥಚಿತ್ತನಾಗಿರಲಿಲ್ಲವೆಂದು ಈ ಎರಡೂ ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ.

9. ಈ ಉಯಿಲನ್ನು ದಿನಾಂಕ 31.3.1954 ಆಗಿದ್ದರೂ, 2ನೇ ಪ್ರತಿವಾದಿಯ ಹೆಸರಿನಲ್ಲಿ, ಆಪಾದಿಸಲಾದ ಉಯಿಲು ನಿಶಾನೆ ಡಿ.4 ಆಧಾರದ ಮೇಲೆ, ಮೊದಲನೇ ಸಲ ಪಂಚಾಯತ್ ದಾಖಲೆಗಳಲ್ಲಿ 1990ರ ವರೆಗೂ ಅವನ ಹೆಸರನ್ನು

ನಮೂದಿಸಿರುವುದಿಲ್ಲದಿರುವುದು ಈ ದಾಖಲೆಗಳಿಂದ ಕಂಡು ಬರುತ್ತದೆ. ಈ ಸ್ವತ್ತು ತನ್ನ ಪತ್ನಿ ಯಲ್ಲವ್ವನ ಅನುಭೋಗದಲ್ಲಿರಬೇಕೆಂದು ಮತ್ತು ತದನಂತರ, ಅದನ್ನು, 2ನೇ ಪ್ರತಿವಾದಿಗೆ ಒಪ್ಪಿಸಬೇಕೆಂಬುದು ಆಪಾದಿತ ಉಯಿಲಿನ ಒಳಾಂಶಗಳಾಗಿವೆ. ಒಪ್ಪಿತವಾದಂತೆ, ಯಲ್ಲವ್ವ, 1968ನೇ ವರ್ಷದಲ್ಲಿ ಮೃತರಾಗಿದ್ದಾರೆ. ಉಯಿಲನ್ನು 22 ವರ್ಷಗಳಿಗಿಂತ ಹೆಚ್ಚು ಕಾಲ ನಿರ್ವಹಿಸಿರುವುದಿಲ್ಲ. ಈ 22 ವರ್ಷಗಳ ದೀರ್ಘಾವಧಿ ಅಂತರದಲ್ಲಿ ಈ ಉಯಿಲನ್ನು ಬರೆದುಕೊಟ್ಟಿರುವುದರ ಬಗ್ಗೆ ಸಂಬಂಧಪಟ್ಟಂತೆ ಸಂದೇಹ ಸೃಷ್ಟಿಯಾಗಿದೆ. ಈ ಉಯಿಲು ಸಂದೇಹದ ಸಂದರ್ಭಗಳ ಪರಿಸ್ಥಿತಿಗಳನ್ನು ಸುಸ್ಥಾಪಿಸಿದೆ. ಈ ಸಂದರ್ಭಗಳಲ್ಲಿ, 2ನೇ ಪ್ರತಿವಾದಿಯು, ಈ ಅಧಿನಿಯಮದ 63 ಮತ್ತು ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣಗಳೊಂದಿಗೆ ಅನುಸಾರವಾಗಿ ಈ ಉಯಿಲನ್ನು ರುಜುವಾತುಪಡಿಸಲು ವಿಫಲನಾಗಿದ್ದಾನೆಯೆಂದು ಈ ಉಭಯ ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ. ಈ ಉಯಿಲಿನ ಅನುಪ್ರಮಾಣ ಮತ್ತು ಬರೆದುಕೊಟ್ಟಿರುವುದು ಕಾನೂನಿನ ಅನುಸಾರ ರುಜುವಾತುಪಟ್ಟಿರುವುದಿಲ್ಲ.

10. ಇಂಥ ಸಂದರ್ಭಗಳಲ್ಲಿ, ಈ ಕೆಳ ನ್ಯಾಯಾಲಯಗಳು ನೀಡಿರುವ ನಿರ್ಣಯಗಳಲ್ಲಿನ ಸಾಕ್ಷ್ಯದಲ್ಲಿ ಯಾವುದೇ ದುರ್ಬಲತೆ ಅಥವಾ ಕ್ರಮದೋಷ ವಾಗಿರಲಿ, ಯಾವುದೇ ವ್ಯತಿರಿಕ್ತತೆಯಾಗಲಿ ಅಥವಾ ದೋಷವಾಗಲಿ ಕಂಡುಬರುವುದಿಲ್ಲ.

11. ಈ ಅಪೀಲಿನಲ್ಲಿ ಪರಿಗಣನೆಗಾಗಿ ಕಾನೂನಿನ ಯಾವುದೇ ಗಣನೀಯ ಪ್ರಶ್ನೆಯು, ಉದ್ಭವಿಸುವುದಿಲ್ಲ.

ಈ ಅಪೀಲನ್ನು ವಜಾಗೊಳಿಸಲಾಗಿದೆ.

---